# ಹೊಸತು




## ಫೌಂಡೇಷನ್ ಕ್ರೀಮ್

ಸೌಂದರ್ಯ ವರ್ಧಕ ಉತ್ಪನ್ನಗಳಿಗೆ ಹೆಸರಾದ ರೆವ್ಲಾನ್ ಕಂಪೆನಿ 'ಕಲರ್‌ಸ್ಟೇ 2 ಇನ್ 1 ಕಾಂಪ್ಯಾಕ್ಟ್ ಮೇಕಪ್ ಅಂಡ್ ಕಾನ್ಸೀಲರ್' ಫೌಂಡೇಷನ್ ಕ್ರೀಮ್ ಅನ್ನು ಪರಿಚಯಿಸಿದೆ. ಇದರಿಂದ ಮೇಕಪ್ ಮಾಡಿದರೆ, ಮುಖ ಸಹಜ ಮತ್ತು ತಾಜಾತನದಿಂದ ಕಂಗೊಳಿಸುತ್ತದೆ ಎಂದು ಕಂಪೆನಿ ಹೇಳಿದೆ. ಬೆಲೆ 1,695 ರೂಪಾಯಿ. ಮಾಹಿತಿಗೆ: 9819429662

## ಇಂಟೆಕ್ಸ್ ರೆಫ್ರಿಜರೇಟರ್, ವಾಷಿಂಗ್‌ಮಷಿನ್




ಮೊಬೈಲ್ ಇನ್ನಿತರ ಎಲೆಕ್ಟ್ರಾನಿಕ್ ಉತ್ಪನ್ನಗಳಿಗೆ ಹೆಸರಾದ ಇಂಟೆಕ್ಸ್ ಕಂಪೆನಿ ಹೊಸದಾಗಿ ರೆಫ್ರಿಜರೇಟರ್, ವಾಷಿಂಗ್‌ಮಷಿನ್‌ಅನ್ನು ಮಾರುಕಟ್ಟೆಗೆ ಪರಿಚಯಿಸಿದೆ. ರೆಫ್ರಿಜರೇಟರ್‌ನ ಸಾಮರ್ಥ್ಯ 170 ರಿಂದ 190 ಲೀಟರ್‌ಗಳಷ್ಟಿದ್ದು, ವಿದ್ಯುತ್ ಕಡಿತವಾದ ಸಮಯದಲ್ಲಿಯೂ ವಸ್ತುಗಳು ಕೆಡುವುದಿಲ್ಲ ಎಂಬುದು ಕಂಪೆನಿ ವಿವರಣೆ.
ವಾಷಿಂಗ್ ಮಷಿನ್‌ನ 6.2 ಕೆ.ಜಿ ಸಾಮರ್ಥ್ಯಹೊಂದಿದ್ದು, ಉತ್ತಮವಾಗಿ ಕಾರ್ಯ ನಿರ್ವಹಿಸುತ್ತದೆ ಎಂಬುದು ಕಂಪೆನಿ ವಿವರಣೆ. ಬೆಲೆ ಕ್ರಮವಾಗಿ 14, 300, 14,990 ರೂಪಾಯಿ. www.intex.in



## ಪ್ಲಾಟಿನಂ ಒಡವೆ

ಒಡವೆಗಳ ತಯಾರಿಕೆಗೆ ಹೆಸರಾದ ಕಂಪೆನಿ 'ಪ್ಲಾಟಿನಂ ಗಿಲ್ಡ್ ಆಫ್ ಇಂಡಿಯಾ ರಕ್ಷಾ ಬಂಧನ ಹಬ್ಬವನ್ನು ನೆಪವಾಗಿಟ್ಟುಕೊಂಡು ಪ್ಲಾಟಿನಂ ಒಡವೆಗಳ ಸಂಗ್ರಹವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಒಡವೆಗಳನ್ನು ವಿಶಿಷ್ಟವಾಗಿ ವಿನ್ಯಾಸಗೊಳಿಸಲಾಗಿದ್ದು, ಈ ಸಂಗ್ರಹದಲ್ಲಿ ಓಲೆ, ಪೆಂಡೆಂಟ್‌ಗಳು ಇವೆ ಎಂಬುದು ಕಂಪೆನಿ ಮಾತು.
ಬೆಲೆ 15,000 ರೂಪಾಯಿಯಿಂದ ಆರಂಭ.
www.preciousplatinum.in

## ಡೆಲ್‌ಮೊಂಟೆ

ಆಹಾರ ಉತ್ಪನ್ನಗಳ ತಯಾರಿಕೆಗೆ ಹೆಸರಾದ ಕಂಪೆನಿ ಡೆಲ್‌ಮೊಂಟೆ 'ಕ್ರ್ಯಾನ್ಬೆರ್ರಿ ನಟ್ ಕ್ಲಸ್ಟರ್' ಹೆಸರಿನ ಚಾಕೊಲೇಟ್ ಅನ್ನು ಪರಿಚಯಿಸಿದೆ. ಈ ಚಾಕೊಲೇಟ್ ರುಚಿಕರವಾಗಿದ್ದು, ಸೋದರ–ಸೋದರಿಯರ ನಡುವೆ ಪ್ರೀತಿ ಹೆಚ್ಚಿಸುತ್ತದೆ ಎಂದು ಕಂಪೆನಿ ಹೇಳಿದೆ.



## ನಿವಿಯ ಸೋಪ್

ಸೌಂದರ್ಯ ವರ್ಧಕ ಉತ್ಪನ್ನಗಳಿಗೆ ಹೆಸರಾದ ಕಂಪೆನಿ ನಿವಿಯ 'ನಿವಿಯ ಕ್ರೀಮ್ ಕೇರ್ ಸೋಪ್' ಅನ್ನು ಪರಿಚಯಿಸಿದೆ. ಇದು ಚರ್ಮವನ್ನು ಮೃದುವಾಗಿಸಿ, ಚರ್ಮದ ತೇವಾಂಶ ಕಾಪಾಡುತ್ತದೆ ಎಂದು ಕಂಪೆನಿ ಹೇಳಿದೆ. ಬೆಲೆ 44 ರೂಪಾಯಿ.




## ಟೈಟಾನ್‌ನಿಂದ ಸ್ಮಾರ್ಟ್‌ವಾಚ್

ಕೈಗಡಿಯಾರಗಳ ತಯಾರಿಕೆಗೆ ಹೆಸರಾದ ಟೈಟಾನ್ ಕಂಪೆನಿ 'ಜುಕ್ಸ್ಟ್ ಪ್ರೊ' ಹೆಸರಿನ ಕೈಗಡಿಯಾರವನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿದೆ. ಇದರಲ್ಲಿ ಆ್ಯಂಡ್ರಾಯ್ಡ್ ಫೋನ್‌ಗೆ ಡೌನ್‌ಲೋಡ್ ಮಾಡಿ ಬೇಕೆಂದ ರೀತಿ ಹೊಂದಿಸಿಕೊಳ್ಳುವ ಸೌಲಭ್ಯ ಇದೆ ಎಂಬುದು ಕಂಪೆನಿ ವಿವರಣೆ.
ಬೆಲೆ 22, 995 ರೂಪಾಯಿ.
www.titan.co.in\juxt_pro

